**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕುಂದಾಪುರ**

ಒ.ಎಸ್.ನಂಬ್ರ: 397/2016 ಪಿ.ಡಬ್ಲ್ಯೂ : 2

ದಿನಾಂಕ: 07-12-2021

ಸಾಕ್ಷಿದಾರರ ಹೆಸರು : ಪೀಟರ್ ಫೆರ್ನಾಂಡಿಸ್

ತಂದೆಯ ಹೆಸರು : ಕಾಶ್ಮೀರ್ ಫೆರ್ನಾಂಡಿಸ್

ಪ್ರಾಯ : 74

ಉದ್ಯೋಗ : ಪಾದ್ರಿ

ವಾಸ ಸ್ಥಳ : ಮಂಗಳೂರು

ಪ್ರಮಾಣ ವಚನ ಮಾಡಿಸಲಾಗಿದೆ
ಮುಖ್ಯ ವಿಚಾರಣೆ : ವಾದಿ ಪರ ವಕೀಲರಾದ ಶ್ರೀ ಎಂ.ಎಸ್.ಎಸ್ ವಕೀಲರಿಂದ

ನಾನು ಈ ಕೇಸಿನ : ವಾದಿಯ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ.

ವಾದಿ ನನಗೆ ತಮ್ಮನಾಗಬೇಕು. ಪ್ರತಿವಾದಿ 1 ಮತ್ತು 2 ನೇಯವರು ನನಗೆ ಅಕ್ಕಂದಿರಾಗಬೇಕು. 4 ನೇ ಪ್ರತಿವಾದಿ ನನಗೆ ತಮ್ಮನಾಗಬೇಕು. ನಾನು ಈ ದಾವೆಯಲ್ಲಿ 3 ನೇ ಪ್ರತಿವಾದಿಯಾಗಿರುತ್ತೇನೆ. ನನ್ನ ತಂದೆಯವರಿಗೆ ಭೂನ್ಯಾಯ ಮಂಡಳಿಯಿಂದ ದಾವಾ ಆಸ್ತಿಗಳು ಮಂಜೂರಾಗಿರುತ್ತವೆ. ನನ್ನ ತಂದೆ ತಾಯಿಗೆ ನಾವು ಒಟ್ಟು 8 ಜನ ಮಕ್ಕಳು. 1 ನೇ ಪ್ರತಿವಾದಿಗೆ ಮಕ್ಕಳು ಇರುವುದಿಲ್ಲ ಮತ್ತು ಗಂಡ ಮೃತಪಟ್ಟಿರುತ್ತಾರೆ. 2 ನೇ ಪ್ರತಿವಾದಿಯು ಕ್ರೈಸ್ತ ಸನ್ಯಾಸಿಯಾಗಿರುತ್ತಾಳೆ. ನನ್ನ ತಂದೆಯವರು ತನ್ನ ಜೀವಿತಾವಧಿಯಲ್ಲಿ ವಿಲುನಾಮೆ ಬರೆದಿಟ್ಟಿದ್ದು ಅದರ ವಯಕ್ತಿಕ ಅನುಭವ ನನಗೆ ಇರುತ್ತದೆ. ಈಗ ನಾನು ನೋಡುತ್ತಿರುವ ವೀಲುನಾಮೆಯನ್ನು ನನ್ನ ತಂದೆಯವರು ಹೇಳಿಸಿ ಬರೆದಿಟ್ಟ ವೀಲುನಾಮೆಯಾಗಿರುತ್ತದೆ. ಅದಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ನನ್ನ ತಂದೆಯವರು ವೀಲುನಾಮೆಯನ್ನು ಬರೆಸುವಾಗ ಒಳ್ಳೆಯ ಬುದ್ಧಿಶಕ್ತಿಯನ್ನು ಹೊಂದಿದ್ದರು. ಸದ್ರಿ ವೀಲುನಾಮೆಯನ್ನು ಕುಂದಾಪುರ ಕಸಾಬಾದ ಕೋಡಿಯಲ್ಲಿನಮ್ಮ ಮನೆಯಲ್ಲಿ ಬರೆದಿದ್ದು ಅದನ್ನು ನೋಂದಾಯಿಸಲು ಉಪನೋಂದಣಾಧಿಕಾರಿಗಳು ಮನೆಗೆ ಬಂದಿದ್ದರು. ನನ್ನ ತಂದೆಯವರಿಗೆ ಪದೇ ಪದೇ ಮೂತ್ರ ವಿಸರ್ಜನೆಯ ಕಾಯಿಲೆ ಇದ್ದುದರಿಂದ ಸದರಿ ವೀಲುನಾಮೆಯನ್ನು ಮನೆಯಲ್ಲಿ ನೋಂದಣಿ ಮಾಡಲಾಗಿತ್ತು. ಸದ್ರಿ ವೀಲುನಾಮೆಯಲ್ಲಿ ಬರೆದ ವಿಚಾರವನ್ನು ಉಪನೋಂದಣಾಧಿಕಾರಿಗಳು ಕನ್ನಡ ಭಾಷೆಯಲ್ಲಿ ಓದಿ ಹೇಳಿರುತ್ತಾರೆ. ಅದನ್ನು ಒಪ್ಪಿ ಅವರು ಅದಕ್ಕೆ ಹೆಬ್ಬೆಟ್ಟಿನ ಗುರುತುಗಳನ್ನು ಹಾಕಿರುತ್ತಾರೆ.

ಸಾಕ್ಷಿಯು ನೋಡಿ ಗುರುತಿಸಿದ ವೀಲುನಾಮೆಯನ್ನು ನಿಪಿ-4 ಎಂದೂ ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-4(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ತಂದೆಯ ಹೆಬ್ಬೆಟ್ಟಿನ ಗುರುತುಗಳನ್ನು ನೋಡಿ ಗುರುತಿಸಿದ್ದು ಹೆಬ್ಬೆಟ್ಟಿನ ಗುರುತುಗಳಾಗಿದ್ದರಿಂದ ನಿಶಾನೆಯಾಗಿ

ಗುರುತಿಸಿರುವುದಿಲ್ಲ. ಸದರಿ ವೀಲುನಾಮೆಗೆ ಕುಂದಾಪುರದ ಚಿಕನ್ಸಾಲಿನಲ್ಲಿರುವ ಅಬುಮಹಮ್ಮದ್ ರವರು ಸಾಕ್ಷಿಯಾಗಿ ಸಹಿ ಹಾಕಿದ್ದು ಅವರು ಈಗ ಜೀವಂತ ಇರುವುದಿಲ್ಲ. ಸದರಿಯವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಸಿ ) ಮತ್ತು (ಡಿ) ಎಂದು ಗುರುತಿಸಲಾಯಿತು.

ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಿಸೆ ಬೇಡ. ನನ್ನ ಹಿಸೆಯ ಆಸ್ತಿಯು ವಾದಿ ಮತ್ತು 4 ನೇ ಪ್ರತಿವಾದಿಗೆ ಸಮಾನವಾಗಿ ಹೋಗಬೇಕೆಂದು ನನ್ನ ಇಚ್ಛೆ.

**ಪಾಟೀ ಸವಾಲುಃ ಶ್ರೀ ಎಚ್.ಆರ್.ಎಸ್ ವಕೀಲರಿಂದ**

ಪ್ರತಿವಾದಿ ಮತ್ತು ಪ್ರತಿವಾದಿ ಪರ ವಕೀಲರನ್ನು ಕೂಗಿಸಲಾಯಿತು. ಗೈರು ಹಾಜರಿರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇರುವುದಿಲ್ಲ.**

**ಓ.ಹೇ.ಕೇ.ಸ.ಇದೆ** **ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ C/c**